ನಿ-72 (791)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ: ವೈ.ಎ ನಾರಾಯಣಸ್ವಾಮಿ ಇವರ ನಿಯಮ 72ರಡಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು & ಉನ್ನತ ಶಿಕ್ಷಣ ಸಚಿವರ ಹೇಳಿಕೆ**

**ವಿಷಯ**

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರನ್ನು ಕರ್ನಾಟಕ ರಾಜ್ಯ ಪತ್ರ ದಿನಾಂಕ: 17.01.2020ರ ಅಧಿಸೂಚನೆಯ ಪುಟ ಸಂಖ್ಯೆ:06ರ ಕ್ರಮ ಸಂಖ್ಯೆ:11ರ ಅನ್ವಯ ಅವರನ್ನು ಪ್ರಾಧ್ಯಾಪಕರೆಂದು ಪರಿಗಣಿಸಬೇಕೆಂದಿರುವುದರಿಂದ ಸದರಿಯವರನ್ನು ಪ್ರಾಧ್ಯಾಪಕರ ಸಾಮಾನ್ಯ ಜೇಷ್ಠತಾ ಪಟ್ಟಿಯಲ್ಲಿ ಸೇರಿಸುವ ವಿಷಯದ ಬಗ್ಗೆ

**ಉತ್ತರ**

ಕರ್ನಾಟಕ ರಾಜ್ಯ ಪತ್ರದಲ್ಲಿ "ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿನ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣದ ಅಧ್ಯಾದೇಶ 2020" ನ್ನು ದಿನಾಂಕ:17.01.2020ರ ಅಧಿಸೂಚನೆ ಮೂಲಕ ಪ್ರಕಟಿಸಲಾಗಿದೆ. ಇದು ಯು.ಜಿ.ಸಿ/ಎ.ಐ.ಸಿ.ಟಿ.ಇ/ ಐ.ಸಿ.ಎ.ಆರ್ ವೇತನ ಶ್ರೇಣಿಯಲ್ಲಿ ವೇತನ ಪಡೆಯುವ ಸಿಬ್ಬಂದಿಗಳಿಗೆ ವೇತನ ಮತ್ತು ನಿವೃತ್ತಿ ವೇತನಗಳನ್ನು ಪಾವತಿಯನ್ನು ನಿಯಂತ್ರಿಸುವ ಅಧ್ಯಾದೇಶವಾಗಿದೆ. ಸದರಿ ಅಧ್ಯಾದೇಶವು ವೇತನ ಮತ್ತು ನಿವೃತ್ತಿ ವೇತನಗಳ ನಿಯಂತ್ರಣಕಷ್ಟೇ ಸೀಮಿತವಾಗಿದ್ದು. ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರನ್ನು ಪ್ರಾಧ್ಯಾಪಕರ ಜೇಷ್ಠತಾಪಟ್ಟಿಯಲ್ಲಿ ಸೇರಿಸಲು ಅವಕಾಶ ಕಲ್ಪಿಸುವುದಿಲ್ಲ.

**ಇಡಿ 48 ಯುಇಸಿ 2020**

**(ಡಾ: ಅಶ್ವಥ್ ನಾರಾಯಣ ಸಿ.ಎನ್)**

ಉಪ ಮುಖ್ಯಮಂತ್ರಿಗಳು & ಉನ್ನತ ಶಿಕ್ಷಣ ಸಚಿವರು